ಕರ್ನಾಟಕ ಸರ್ಕಾರ

ಸಂಖ್ಯೆ:- ಡಿಟಿಇ/26/ಎಸ್‌ಪಿಎಸ್[2]/2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 21/08/2019

ಇವರಿಗೆ,
ಪ್ರಿನ್ಸಿಪಾಲರು,
ಸರ್ಕಾರಿ ಇಂಜನೀಯರಿಂಗ್ ಕಾಲೇಜ್
ಹೂವಿನಹಡಗಲಿ

ಮಾನ್ಯರೆ,

**ವಿಷಯ:-** ಸಂಸ್ಥೆಯ ಪಿ.ಡಿ.ಖಾತೆಯಲ್ಲಿ ವಿದ್ಯಾರ್ಥಿಗಳು ವಾಪಸ್ಸು ಪಡೆಯದೇ ಉಳಿದಿರುವ ಗ್ರಂಥಾಲಯ ಠೇವಣಿ ಮೊತ್ತವನ್ನು ಗ್ರಂಥಾಲಯ ಅಭಿವೃದ್ಧಿಗಾಗಿ ಉಪಯೋಗಿಸುವ ಬಗ್ಗೆ.

**ಉಲ್ಲೇಖ:-** ತಮ್ಮ ಪತ್ರದ ಸಂ: ಸ.ಇ.ಕಾ.ಹೂ.ಹ/ಗ್ರಂಥಾಲಯ/2019/99 ದಿ:20/06/2019

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದಲ್ಲಿ 2007-08 ರಿಂದ 2014-15 ರವರೆಗೆ ವಿದ್ಯಾರ್ಥಿಗಳಿಗೆ ವಿತರಿಸದೇ ಸಂಸ್ಥೆಯ ಪಿ.ಡಿ.ಖಾತೆಯಲ್ಲಿ ಉಳಿದಿರುವ ಗ್ರಂಥಾಲಯ ಠೇವಣಿಯ ಮೊತ್ತ ರೂ.3,80,500/-ಗಳ ಬಗ್ಗೆ ಮಹಾಲೇಖಪಾಲಕರು ತಮ್ಮ ಆಡಿಟ್ ತಪಾಸಣೆಯಲ್ಲಿ ಸೂಚಿಸಿರುವಂತೆ ಗ್ರಂಥಾಲಯ ಅಭಿವೃದ್ಧಿಗಾಗಿ ಉಪಯೋಗಿಸಲು ಅನುಮೋದನೆ ಕೋರಿರುತ್ತೀರಿ.

ಮುಂದುವರಿದು ತಮ್ಮ ಕೋರಿಕೆಯೊಂದಿಗೆ ಸಲ್ಲಿಸಿರುವ ಅಡಕಗಳಲ್ಲಿ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಗ್ರಂಥಾಲಯ ಠೇವಣಿಯ ಮೊತ್ತವನ್ನು ವಾಪಸ್ಸು ಪಡೆಯಲು ಹೊರಡಿಸಲಾದ ಸುತ್ತೋಲೆಗಳ ಪ್ರತಿಗಳನ್ನು,ಹಾಗೂ ಸಂಸ್ಥೆಯ ಹಂತದ ಸಮಿತಿಯಲ್ಲಿನ ನಡವಳಿಗಳಲ್ಲಿ ವಾಪಸ್ಸು ಪಡೆಯದ ಗ್ರಂಥಾಲಯ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಗ್ರಂಥಾಲಯ ಅಭಿವೃದ್ಧಿಗಾಗಿ ಬಳಸಿಕೊಳ್ಳುವ ನಿರ್ಣಯದ ಪ್ರತಿಯನ್ನು ಸಲ್ಲಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಮಹಾಲೇಖಪಾಲಕರು ತಮ್ಮ ಆಡಿಟ್ ತಪಾಸಣೆಯಲ್ಲಿ ಸೂಚನೆಯಂತೆ ಪ್ರಾಚಾರ್ಯರು ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಗ್ರಂಥಾಲಯ ಠೇವಣಿಯ ಮೊತ್ತವನ್ನು ವಾಪಸ್ಸು ಪಡೆಯಲು ತಿಳಿಸಲಾಗಿದ್ದರೂ ವಿದ್ಯಾರ್ಥಿಗಳು ವಾಪಸ್ಸು ಪಡೆಯದೇ ಇರುವ ಕಾರಣ ಮುಟ್ಟುಗೋಲು ಹಾಕಿಕೊಂಡು ಗ್ರಂಥಾಲಯ ಅಭಿವೃದ್ಧಿಗೆ ಸಮಿತಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಮುಟ್ಟುಗೋಲು ಹಾಕಿಕೊಳ್ಳಲಾದ ಪಿ.ಡಿ.ಖಾತೆಯಲ್ಲಿ ಉಳಿದಿರುವ ಗ್ರಂಥಾಲಯ ಠೇವಣಿಯ ಮೊತ್ತ ರೂ.3,80,500/-ಗಳಲ್ಲಿ ಸಂಸ್ಥೆಯ ಗ್ರಂಥಾಲಯಕ್ಕೆ ಅವಶ್ಯವಿರುವ ಗ್ರಂಥಾಲಯ **ಪುಸ್ತಕಗಳು,** ಜರ್ನಲ್ಸ್‌ಗಳು ಹಾಗೂ ಇನ್ನಿತರೆ ಗ್ರಂಥಾಲಯದ ಎ.ಐ.ಸಿ.ಟಿ.ಇ ನ್ಯೂನತೆಗಳಿಗೆ **ಸಂಬಂಧಿಸಿದ** ವೆಚ್ಚಗಳಿಗೆ **<u>ನಿಯಮಾನುಸಾರ</u>** ಉಪಯೋಗಿಸಲು ಅನುಮತಿ ನೀಡಲಾಗಿದೆ.

ತಮ್ಮ ನಂಬುಗೆಯ,

<u>ಟಿಪ್ಪಣಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ</u>

K.G. 22/08/19

ಅಪರನಿರ್ದೇಶಕರು

ಪ್ರತಿ:-01. ಎಲ್ಲಾ ಸರ್ಕಾರಿ ಇಂಜನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಅಗತ್ಯಕ್ರಮಕ್ಕಗಿ

02.ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು